ಇ) ಭದ್ರಾ ಮೇಲ್ದಂಡೆ ಯೋಜನೆಗೆ ಕರಡು ಏಳನೇ ಪಾಂಚವಾರ್ಷಿಕ ಯೋಜನೆಯಲ್ಲಿ ೨೫ ಲಕ್ಷ ರೂಪಾಯಿಗಳನ್ನು ಒದಗಿಸಿದೆ.

ಈ) ಬಂದಿಲ್ಲ.

ಉ) ಸವಿವರವಾದ ಆನ್ವೇಷಣೆ ಕಾರ್ಯ ಮುಗಿದನಂತರ ಯೋಜನೆಯ ವೆಚ್ಚವು ತಿಳಿಯುವುದು ತಾಂತ್ರಿಕ ಸಮಿತಿಯವರಿಗೂ ಆರ್ಥಿಕ ಮತ್ತು ಯೋಜನಾ ಇಲಾಖೆಯ ಒಪ್ಪಿಗೆ ಪಡೆದು ಕೇಂದ್ರ ಸರ್ಕಾರದ ಸಮ್ಮತಿ ಪಡೆದ ನಂತರ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಚಿಸಲಾಗುವುದು.

ಮುಳುಗು ಸೇತುವೆಯ ನಿರ್ಮಾಣದ ಬಗ್ಗೆ

೧೫೪೪ (೩೫೧೧) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಲೋಕೋಪಯೋಗಿ ಆಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ದಕ್ಷಿಣ ಕನ್ನಡ ಜಿಲ್ಲೆಯು ಕಳೆದ ೨೦ ವರ್ಷಗಳ ಮಳೆ ಗಮನಿಸಿದರೆ ಈಗಿನ ಮಳೆಯು ಪ್ರಮಾಣ ಬಹಳ ಕಡಿಮೆಯಾಗಿರುವುದರಿಂದ ಇಲ್ಲಿನ ನದಿಗಳಿಗೆ ಮತ್ತು ಹೊಳೆಗಳಿಗೆ ಬೃಹತ್ ಸೇತುವೆಗಳನ್ನು ನಿರ್ಮಾಣ ಮಾಡುವ ಬದಲು ಮುಳುಗು ಸೇತುವೆಗಳನ್ನು ನಿರ್ಮಾಣ ಮಾಡುವುದು ಉತ್ತಮವಲ್ಲವೆ?

ಆ) ಇಂತಹ ಮುಳುಗು ಸೇತುವೆಗಳನ್ನು ನಿರ್ಮಾಣ ಮಾಡುವುದನ್ನು ಸರಕಾರದವರು ಕೈಕೊಂಡರೆ ಬೃಹತ್ ಸೇತುವೆ ನಿರ್ಮಾಣದ ಖರ್ಚಿನ ಅಂಶದಷ್ಟು ಕಡಿಮೆ ಆಗುವುದಿಲ್ಲವೆ ?

ಇ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಹೊಸ್ಮದಲ್ಲಿ ನಿರ್ಮಾಣವಾದ ಹೊಸ್ಮದ ಹೊಳೆಯ ಮುಳುಗು ಸೇತುವೆ ಸಂಚಾರಕ್ಕೆ ಯೋಗ್ಯವಾಗಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗಾದರೂ ಮುಳುಗು ಸೇತುವೆಗಳನ್ನು ರಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಮುಳುಗು ಸೇತುವೆಗಳನ್ನು ಕಟ್ಟಬೇಕೇ ಅಥವಾ ಮೇಲ್ಮಟ್ಟದ ಸೇತುವೆಯನ್ನು ಕಟ್ಟಬೇಕೇ ಎಂಬ ವಿಚಾರವನ್ನು ಸ್ಥಳದ ಪರಿಸ್ಥಿತಿಗಳಿಗನುಗುಣವಾಗಿ ಅಂದರೆ ರಸ್ತೆಯ ಪ್ರಾಮುಖ್ಯತೆ, ವಾಹನ ಸಾಂದ್ರತೆ ಮತ್ತು ಪ್ರವಾಹದಲ್ಲಿ ಮುಳುಗುವ ಕಾಲ, ನದಿಗಳ/ನಾಲದ ಪಾತ್ರ, ದೋಣಿ ಸಾರಿಗೆಯ ಅವಶ್ಯಕತೆಗಳು, ಮತ್ತು ಇತರ ಅಂಶಗಳನ್ನಾಧರಿಸಿ ನಿರ್ಧರಿಸಬೇಕಾಗುತ್ತದೆ. ಎಲ್ಲಾ ಹೊಳೆಗಳಿಗೂ ಮುಳುಗು ಸೇತುವೆಗಳನ್ನು ಕಟ್ಟುವುದು ಸಾಧುವಲ್ಲ.

ಆ) ಬೃಹತ್ ಸೇತುವೆಗಳ ನಿರ್ಮಾಣದಲ್ಲಿ ಮುಳುಗು ಸೇತುವೆಗಳ ನಿರ್ಮಾಣದಿಂದ ಸುಮಾರು ೫೦. ೨೦ ರಷ್ಟು ಕಡಿಮೆಯಾಗಬಹುದು. ಇದನ್ನು, ಪರೋಕ್ಷ ಅನುಕೂಲತೆಗಳು, ಆರ್ಥಿಕ ಅಂಶಗಳು ಬೆನಿಫಿಟ್ಸ್ ಕಾಸ್ಟ್ ರೇಷ್ಯೋ. ಇವುಗಳನ್ನಾಧರಿಸಿ ನಿರ್ಧರಿಸಬೇಕು.

ಇ) (ಅ) ಗೆ ಕೊಟ್ಟಿರುವ ಉತ್ತರದಲ್ಲಿ ಸೂಚಿಸಿರುವಂತೆ ಎಲ್ಲಾ ಹೊಳೆಗಳಿಗೂ ಮುಳುಗು ಸೇತುವೆಗಳನ್ನು ಕಟ್ಟುವುದು ಸೂಕ್ತವಲ್ಲ. ಆಯಾಯಾ ಸಂದರ್ಭಗಳನ್ನಾಧರಿಸಿ ಆರ್ಥತೆಯ ಆಧಾರದ ಮೇಲೆ ಪ್ರತಿಯೊಂದು ಕೆಲಸಕ್ಕೂ ಮುಳುಗು ಸೇತುವೆ ಅಥವಾ ಮೇಲ್ಮಟ್ಟದ ಸೇತುವೆಯನ್ನು ಕಟ್ಟುವ ವಿಚಾರದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಇರುವ ಶಿಕ್ಷಕರ ಹುದ್ದೆಗಳ ಬಗ್ಗೆ

೧೫೫೫ (೫೫೮೮) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆ ಮತ್ತು ಕಿರಿಯ ಮಹಾ ವಿದ್ಯಾಲಯಗಳಲ್ಲಿ ಶಿಕ್ಷಕರ ಹಾಗೂ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ಎಷ್ಟು ಸಮಯದೊಳಗೆ ನೀಗಿಸಲಾಗುವುದು ?

ಶ್ರೀ ಡಿ. ಮಂಜುನಾಥ್ (ವಿದ್ಯಾ ಮಂತ್ರಿಗಳು).—

ಅ) ಬಂದಿದೆ.

ಆ) ಆಗಲೇ ಕ್ರಮ ಕೈಗೊಳ್ಳಲಾಗಿದೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯ ಕಾರ್ಯದ ಬಗ್ಗೆ

೧೫೬(೫೦೩) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಳ್ತಂಗಡಿ ತಾಲ್ಲೂಕಿಗೆ ಪಶ್ಚಿಮ ಘಟ್ಟಗಳ ಯೋಜನೆಗಳನ್ವಯ ೧೯೮೬-೮೭ನೇ ಸಾಲಿಗೆ ಮಂಜೂರಾದ ಅಭಿವೃದ್ಧಿ ಕಾರ್ಯಗಳೆಷ್ಟು ?

ಆ) ಯಾವ ಗ್ರಾಮಗಳಿಗೆ ಯಾವ್ಯಾವ ಅಭಿವೃದ್ಧಿ ಕಾರ್ಯಗಳೆಂಬುದರ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸಣ್ಣ ನೀರಾವರಿ ಕೆಲಸಗಳು ಖ

ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.